

# ಶಿಶುವನ್ನು ಹೋಲುವ ಆರ್ಕಿಡ್

ಆಂಗೋಲಾ ಯೂನಿಫ್ಲೋರಾ ಎಂಬ ವೈಜ್ಞಾನಿಕ ಹೆಸರುಳ್ಳ ಹೂಗಳನ್ನು ಅರಳಿಸುವ ಆರ್ಕಿಡ್ ಸಸ್ಯಗಳು ತಮ್ಮ ಹೂವುಗಳಿಂದಾಗಿಯೇ ಜಗದ್ವಿಖ್ಯಾತಿಯನ್ನು ಮುಡಿಗೇರಿಸಿಕೊಂಡಿವೆ. ಈ ಸಸ್ಯವು ಅರಳಿಸುವ ಹೂಗಳು ನವಜಾತ ಶಿಶುವನ್ನು ಬಟ್ಟೆಯಲ್ಲಿ ಸುತ್ತಿಟ್ಟಿರುವಂತೆ ಭಾಸವಾಗುವುದೇ ಇದರ ಕುರಿತಾದ ಆಕರ್ಷಣೆಗೆ ಕಾರಣವಾಗಿದೆ. ಇವುಗಳಿಗೆ ದೋಣಿ ಆರ್ಕಿಡ್ ಸಸ್ಯಗಳೆಂದೂ ಕರೆಯುವರು. ಈ ಆರ್ಕಿಡ್ ಸಸ್ಯಗಳು ವೆನೆಜುವೆಲಾ, ಕೊಲಂಬಿಯಾ, ಈಕ್ವೆಟಾರ್, ಬೊಲಿವಿಯಾ ಮತ್ತು ಪೆರುವಿನ ಅರಣ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಸಸ್ಯಶಾಸ್ತ್ರಜ್ಞರಾದ ಲೋಪೆಜ್ ಮತ್ತು ಆಂಟೋನಿಯೊ ಜಿಮೆನಜ್‌ರವರು 1777 ರಿಂದ 1788ರವರೆಗೆ ಚಿಲಿ ಹಾಗೂ ಪೆರು ಪ್ರದೇಶಗಳಿಗೆ ಅಧ್ಯಯನ ಯಾನ ಕೈಗೊಂಡಿದ್ದ ಸಂದರ್ಭದಲ್ಲಿ ಈ ಸಸ್ಯವನ್ನು ಪತ್ತೆಹಚ್ಚಿ ಗುರ್ತಿಸಿದರು. 1798ರವರೆಗೂ ಯಾವುದೇ ವರ್ಗೀಕರಣಕ್ಕೆ ಒಳಗಾಗದಿದ್ದ ಈ ಆರ್ಕಿಡ್ ಸಸ್ಯವನ್ನು ಪೆರುವಿನ ಗಣಿ ವಿಭಾಗದ ಡೈರೆಕ್ಟರ್ ಜನರಲ್ ಆಗಿದ್ದ ಫ್ರಾನ್ಸಿಸ್ಕೋ ಡಿ ಆಂಗುಲೋ ರವರ ಗೌರವಾರ್ಥ ಈ ಪ್ರಬೇಧಕ್ಕೆ ಅವರ ಹೆಸರನ್ನೇ ನಾಮಕರಣ ಮಾಡಲಾಯಿತು. ಈ ಸಸ್ಯಗಳ ಬೆಳವಣಿಗೆಗೆ ಅತೀ ಉಷ್ಣಾಂಶದ ಅವಶ್ಯಕತೆ ಇರುವುದಿಲ್ಲ, ಶೀತ ಹವೆಯಿದ್ದರೂ ಸಾಕು ಹುಲುಸಾಗಿ ಬೆಳೆಯಬಲ್ಲದು.

ಸರಾಸರಿ 18 ರಿಂದ 24 ಇಂಚುಗಳಷ್ಟು ಎತ್ತರಕ್ಕೆ ಬೆಳೆಯಬಲ್ಲ ಈ ಸಸ್ಯವು ತೆಳುವಾದ ಒಂದು ಮೀಟರ್‌ಗೂ ಅಧಿಕ ಉದ್ದವುಳ್ಳ ಎಲೆಗಳನ್ನು ಹೊಂದಿದೆ. ಈ ಸಸ್ಯದ ಗೆಡ್ಡೆಯ ಮೇಲೆ ಮೂರರಿಂದ ನಾಲ್ಕು ಎಲೆಗಳು ಬೆಳೆಯುತ್ತವೆ. ಇದರ ಹೂಗಳು ವಿಶೇಷವಾದ ಸಂಕೀರ್ಣತೆಯಿಂದ ಕೂಡಿದ್ದು, ದೊಡ್ಡಗಾತ್ರದಲ್ಲಿರುತ್ತವೆ. ಅಲ್ಲದೆ ಬಿಳಿ ಮತ್ತು ಹಳದಿ ಬಣ್ಣದಿಂದ ಕೂಡಿರುತ್ತವೆ. ದಾಲ್ಚಿನ್ನಿಯಂತೆ ಸುಹಾಸನೆಭರಿತವಾಗಿರುತ್ತವೆ. ಮೇಣದಂತ ರಚನೆಯುಳ್ಳ ಹೂಗಳು ಚಳಿಗಾಲ ಮತ್ತು ಬೇಸಿಗೆಯಲ್ಲಿ ಅರಳುತ್ತಿರುತ್ತವೆ. ಒಂದು ಕೊಂಬೆಗೆ ಒಂದೇ ಹೂವು ಮಾತ್ರ ಅರಳುವುದು ವಾಡಿಕೆ.

■ ಪ.ನಾ.ಹಳ್ಳಿ.ಹರೀಶ್ ಕುಮಾರ್

